

# ಪೆಪ್ಪಾ ಪೆಪ್ಪಾ ಅಬ್ಬಬ್ಬಾ...

ಮಕ್ಕಳಿಗೆ ಕಥೆ ಹೇಳುವುದು ಖುಷಿ ವಿಚಾರವಾದರೂ ಅವರ ಕಣ್ಣಲ್ಲಿ ಉತ್ಸಾಹ ಕರಗದಂತೆ ಬಣ್ಣಬಣ್ಣವಾಗಿ ಕಥೆ ಕಟ್ಟುವುದು, ನಿರೂಪಿಸುವುದು ಸವಾಲೇ ಸರಿ. ಪುಟ್ಟ ಮಕ್ಕಳಲ್ಲಿ ಕುತೂಹಲ ಬಿತ್ತುತ್ತಾ, ಬೆರಗು ಮೂಡಿಸುವಂತೆ ಭಿನ್ನ ಧಾಟಿಯಲ್ಲಿ ಕಥೆ ಹೇಳಲು ಹುಟ್ಟಿಕೊಂಡಿದ್ದೇ ಕಾರ್ಟೂನ್ ಎಂಬ ಮನರಂಜನಾ ಮಾಧ್ಯಮ.

ರಂಜನೆಯೊಂದಿಗೆ ನೀತಿಯನ್ನೂ ಕಥೆಯಲ್ಲಿ ಅಡಕ ಮಾಡಿ ಆಕರ್ಷಕವಾಗಿ ದಾಟಿಸಿಬಿಡುವ ಈ ಬಹುಜನಪ್ರಿಯ ಮಾಧ್ಯಮ ಮಕ್ಕಳಿಗೆ ಭಾರೀ ಮೆಚ್ಚು. ಚಿತ್ರವಿಚಿತ್ರ ಆಕಾರ, ಧ್ವನಿಯೊಂದಿಗೆ ಬರುವ ಕಾರ್ಟೂನ್ ಕ್ಯಾರೆಕ್ಟರ್‌ಗಳೆಂದರೆ ಪುಟಾಣಿಗಳಿಗೆ ಪ್ರೀತಿ. ಅದರಲ್ಲೂ ಪ್ರಾಣಿಗಳ ಕಾರ್ಟೂನ್ ಪಾತ್ರಗಳೆಂದರೆ ನೋಡಲು ಭಾರೀ ಕೌತುಕ.

ಬಾಲ್ಯದ ಭಾಗವೇ ಆಗಿರುವ ಇಂಥ ಕಾರ್ಟೂನ್ ಪ್ರಪಂಚದ ಪಾತ್ರಗಳು ಮಕ್ಕಳ ಎದುರಿಗೇ ಬಂದರೆ? ಮಕ್ಕಳ ಆ ಸಂತೋಷಕ್ಕೆ ಪಾರವುಂಟೇ?. ಅಂಥದ್ದೇ ಒಂದು ಸಂತಸದ ಕ್ಷಣಕ್ಕೆ ಬೆಂಗಳೂರಿನ ಅಂಬೇಡ್ಕರ್ ಭವನ ಈಚೆಗೆ ಸಾಕ್ಷಿಯಾಗಿತ್ತು.

ಇದುವರೆಗೂ ಟೀವಿಯಲ್ಲಷ್ಟೇ ಕಂಡು ಖುಷಿಪಡುತ್ತಿದ್ದ ಪೆಪ್ಪಾ ಪಿಗ್ ಕಾರ್ಟೂನ್ ಪಾತ್ರಧಾರಿಗಳನ್ನು ನಿಜವಾಗಿ ನೋಡಲು ನೂರಾರು ಮಕ್ಕಳು ಅಲ್ಲಿ ಸೇರಿ, ಸಭಾಂಗಣದ ತುಂಬಾ ಮಕ್ಕಳ ಕಲರವವೇ ತುಂಬಿಕೊಂಡಿತ್ತು.

'ನಿಕ್ ಜ್ಯೂನಿಯರ್' ವಾಹಿನಿಯಲ್ಲಿ ಪ್ರಸಾರವಾಗುವ 'ಪೆಪ್ಪಾ ಪಿಗ್' ಎರಡು ದಶಕದಿಂದಲೂ ಮಕ್ಕಳ ಮನಸನ್ನು ರಂಜಿಸುತ್ತಾ ಬಂದಿರುವ ಕಾರ್ಟೂನ್ ಪಾತ್ರ. ಪೆಪ್ಪಾ ಪಿಗ್ ಕೇಂದ್ರಿತವಾಗಿ ಹೆಣೆದ ಬಹಳಷ್ಟು ಕಥೆಗಳು ಮಕ್ಕಳನ್ನು ಕುಣಿಸಿ ನಲಿಸಿವೆ. ಹಂದಿ ಹಾಗೂ ಅದರ ಕುಟುಂಬದ ಸದಸ್ಯರ ಕಥೆಗಳು ಮಕ್ಕಳನ್ನು ನಗಿಸುತ್ತಲೇ ನೀತಿ ಪಾಠಗಳನ್ನೂ ಹೇಳಿ ಮುದ ನೀಡಿವೆ. ಇದೇ ಪೆಪ್ಪಾ ಪಿಗ್ ಕಾರ್ಟೂನ್ ಅನ್ನು ವೇದಿಕೆ ಮೇಲೆ ತಂದು ಆ ಖುಷಿಯನ್ನು ದುಪ್ಪಟ್ಟು ಮಾಡುವ ಪ್ರಯತ್ನ ನಡೆಯಿತು.

ಮಕ್ಕಳಿಗಾಗಿ ರೂಪಿತಗೊಂಡ ಹೀಗೊಂದು ಹೊಸ ಮನರಂಜನಾ ಕಾರ್ಟೂನ್ ಸಂಗೀತ ರೂಪಕ 'ಪೆಪ್ಪಾ ಪಿಗ್ ಲೈವ್ ಶೋ' ನೋಡಲು ನೂರಾರು ಮಕ್ಕಳು ಜಮಾಯಿಸಿದ್ದರು. ಪುಟ್ಟ ಪುಟ್ಟ ಮಕ್ಕಳು ತಮ್ಮ ಪೋಷಕರೊಂದಿಗೆ ಪೆಪ್ಪಾ ಕಥೆ ಹೇಳುತ್ತಲೇ ಕಾರ್ಯಕ್ರಮ ನೋಡಲು ಅಣಿಯಾಗಿ ಕುಳಿತಿದ್ದರು. 'ಪೆಪ್ಪಾ ಬರೋದು ಯಾವಾಗ?' ಎಂದು ಅಳುತ್ತಲೇ ಕಾಯುತ್ತಿದ್ದ ಪುಟ್ಟಿ, ಶೋ ಆರಂಭವಾಗುತ್ತಿದ್ದಂತೆ ಕಣ್ಣರಳಿಸಿ ಕೇಕೆ ಹಾಕಲು ಶುರುಮಾಡಿದ್ದಳು.

ತಮ್ಮೊಂದಿಗೆ ಥರಾವರಿ ಕಾರ್ಟೂನ್ ಕ್ಯಾರೆಕ್ಟರ್‌ಗಳ ಬೊಂಬೆ ಹಿಡಿದು ಬಂದಿದ್ದ ಮಕ್ಕಳಿಗೆ ವೇದಿಕೆ ಮೇಲೂ ನೇರವಾಗಿ ಅವುಗಳನ್ನು ನೋಡುವ ತವಕ. ಬೆರಗುಗಣ್ಣುಗಳಿಂದ ಪೆಪ್ಪಾ ಪಿಗ್ ಶೋ ನೋಡುತ್ತಾ ಕುಳಿತಿದ್ದ ಮಕ್ಕಳು ಅಲ್ಲಿ ತಮ್ಮದೇ ಲೋಕ ಸೃಷ್ಟಿಸಿಕೊಂಡಿದ್ದರು. ಸಂಗೀತ, ನೃತ್ಯದ ಜೊತೆ ಕಥೆಯನ್ನು ಸುಂದರವಾಗಿ ನಿರೂಪಣೆಗೊಳಿಸುತ್ತಾ ಇದ್ದ ಪರಿ ಮಕ್ಕಳಿಂದ ಮೆಚ್ಚುಗೆ ಗಿಟ್ಟಿಸಿಕೊಂಡಿತ್ತು. ಪೆಪ್ಪಾ ಪಿಗ್, ಜಾರ್ಜ್ ಪಿಗ್, ಡ್ಯಾಡಿ ಪಿಗ್, ಮಮ್ಮಿ ಪಿಗ್, ಸೂಝಿ ಹೀಗೆ ಭಿನ್ನ ಪಾತ್ರಗಳನ್ನು ವೇದಿಕೆ ಮೇಲೆ ಪ್ರಸ್ತುತಗೊಳಿಸಿ ಕಥೆ ಹೇಳಿದ ಪರಿ ಅವರನ್ನು ಮೋಡಿ ಮಾಡಿತ್ತು.

ಕುಟುಂಬದ ಫೋಟೊ ಆಲ್ಬಂ ನೋಡುತ್ತಾ, ಪೆಪ್ಪಾ ಹುಟ್ಟುಹಬ್ಬದ ದಿನ ನಡೆದ ಹಲವು ಸಂಗತಿಗಳನ್ನು ಮೆಲುಕು ಹಾಕುವ ಕಥೆಯನ್ನು ಸಂಗೀತದೊಂದಿಗೆ ಪ್ರಸ್ತುತಪಡಿಸಿದ್ದು ಮಕ್ಕಳ ಮನಸೂರೆಗೊಳಿಸಿತ್ತು. ಆ ಕಾರ್ಟೂನ್ ಪಾತ್ರಗಳೊಂದಿಗೆ ತಾವೂ ಮಾತನಾಡುತ್ತಾ, ಸಂಗೀತ, ನೃತ್ಯಕ್ಕೆ ಹೆಜ್ಜೆ ಹಾಕುತ್ತಾ, ದೃಶ್ಯ ಬದಲಾಗುತ್ತಿದ್ದಂತೆ ಅಚ್ಚರಿಯ ಕಣ್ಣುಗಳೊಂದಿಗೆ ನೋಡುತ್ತಾ ಕುಳಿತ ಮಕ್ಕಳನ್ನು ನೋಡುವುದೇ ಸೊಗಸೆನಿಸಿತ್ತು. ಒಂದೊಂದು ಪಾತ್ರ ವೇದಿಕೆ ಮೇಲೆ ಬಂದಾಗಲೂ ಮಕ್ಕಳ ಮುಖದ ಮೇಲಿನ ನಗುವೂ ಹೆಚ್ಚಾಗುತ್ತಿತ್ತು. ಶೋ ಮುಗಿಯುತ್ತಿದ್ದಂತೆ ಪೆಪ್ಪಾ ಜೊತೆ ಫೋಟೊ ತೆಗೆಸಿಕೊಳ್ಳಬೇಕೆಂದು ಸಂಭ್ರಮದಲ್ಲಿದ್ದ ಮಕ್ಕಳನ್ನು ನೋಡುತ್ತಾ ಪೋಷಕರೂ ಮಕ್ಕಳಾಗಿದ್ದ ರೀತಿ ಮುದವೆನಿಸಿತ್ತು.



ಪೆಪ್ಪಾ ಪಿಗ್, ಬ್ರಿಟಿಷ್ ಮೂಲದ ಪ್ರಿಸ್ಕೂಲ್‌ನ ಪ್ರಸಿದ್ಧ 'ಅನಿಮೇಟೆಡ್ ಕಾರ್ಟೂನ್ ಟೆಲಿವಿಷನ್ ಸಿರೀಸ್'. 2004ರ ಮೇ 31ರಂದು, ಆಸ್ಲೇ ಬೇಕರ್ ಡೇವೈಸ್ ರಚಿತ ಈ ಕಾರ್ಟೂನ್ ಮೊದಲು ಪ್ರಸಾರವಾಯಿತು. ಪೆಪ್ಪಾ ಕುಟುಂಬ ಹಾಗೂ ಸ್ನೇಹಿತರ ಕಲ್ಪನೆಯನ್ನಿಟ್ಟುಕೊಂಡು ಮಕ್ಕಳಿಗೆ ಭಿನ್ನ ಕಥೆಗಳನ್ನು ಹೇಳುತ್ತಿದ್ದ ಇದರ ಏಳನೇ ಸರಣಿ 2021ರ ಮಾರ್ಚ್‌ನಲ್ಲಿ ಆರಂಭವಾಯಿತು. ಭಾರತ ಸೇರಿದಂತೆ 180ಕ್ಕೂ ಹೆಚ್ಚು ದೇಶಗಳಲ್ಲಿ ಪ್ರಸಾರವಾಗುತ್ತಾ ಮಕ್ಕಳ ಮೆಚ್ಚಿನ ಕಾರ್ಟೂನ್ ಎನಿಸಿಕೊಂಡಿದೆ.

ಮಕ್ಕಳ ಕೇಂದ್ರಿತ ಮನರಂಜನೆಗೆ ಒತ್ತು ನೀಡುವ ಉದ್ದೇಶದೊಂದಿಗೆ ಶೋ ನಡೆದಿದ್ದು, ಕಾರ್ಟೂನ್ ಪಾತ್ರಗಳನ್ನು ನೇರವಾಗಿ ನೋಡಿ ಖುಷಿಪಡುವ ಜೊತೆ ಮನರಂಜನೆಯ ಅತ್ಯುತ್ತಮ ಅನುಭವವನ್ನು ತಮ್ಮದಾಗಿಸಿಕೊಳ್ಳುವ ಅವಕಾಶವನ್ನೂ ಪುಟಾಣಿಗಳಿಗೆ ನೀಡಲು 'ವಯಕಾಮ್ 18' ಹಾಗೂ 'ಬುಕ್‌ಮೈ ಶೋ' ಈ ಶೋ ಹಮ್ಮಿಕೊಂಡಿದ್ದವು. ಈಗಾಗಲೇ ಮುಂಬೈ, ದೆಹಲಿಯಲ್ಲಿ ಯಶಸ್ವಿ ಪ್ರದರ್ಶನ ಕಂಡಿರುವ ಈ ಕಾರ್ಯಕ್ರಮ ಇದೇ ಮೊದಲ ಬಾರಿ ಬೆಂಗಳೂರಿನಲ್ಲಿ ಅನಾವರಣಗೊಂಡಿತ್ತು. ಕಾಲ್ಪನಿಕ ಪಾತ್ರಗಳನ್ನು ವೇದಿಕೆ ಮೇಲೆ ಪ್ರಸ್ತುತಪಡಿಸಿದ ಬಗೆ, ಇಂಥ ಇನ್ನಷ್ಟು ಪ್ರಯೋಗಗಳಿಗೆ ಮುನ್ನುಡಿಯಂತಿತ್ತು.

ಪ್ರತಿಕ್ರಿಯಿಸಿ: feedback@sudha.co.in